<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 05.07.2025</u>

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ **7** ಮತ್ತು **8** ರ ಪರವಾಗಿ ಶ್ರೀ. ಕೆ. ಎಂ. ವಕೀಲರಿಂದಃ</u>

ನನ್ನನ್ನು ಮೋಸ ಮಾಡಿ ಜಿ ಪಿ ಎ ಮಾಡಿದ ವ್ಯಕ್ತಿ ಯಾರು ಎಂದು ನಾನು ಈಗ ತಿಳಿದಕೊಂಡಿಲ್ಲ. ನನಗೆ ಆ ರೀತಿ ಮೋಸವಾಗಿದೆ ಎಂದು ಕುರಿತು ನಾನು ಈ ದಾವೆಯನ್ನು ಹೊರತು ಪಡಿಸಿ ಬೇರೆ ಕಾನೂನು ಕ್ರಮವಹಿಸಿಲ್ಲ. ನಾನು ಹೇಳುತ್ತಿರುವ ಜಿ ಪಿ ಎ ದಾಖಲೆ ಸಂಬಂಧವಾಗಿ ಅದನ್ನು ಬರೆದುಕೊಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಂಡಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆ ಆಸ್ತಿ ಸಂಬಂಧಪಟ್ಟಂತೆ ಈ ದಾವೆಯನ್ನು ಸಲ್ಲಿಸಿದ್ದೇನೆ. ಜಿ ಪಿ ಎ ದಾಖಲೆಯ ಸಂಬಂಧವಾಗಿ ನನ್ನ ಚಿಕ್ಕಮ್ಮ ಚಿಕ್ಕಪ್ಪ ಮತ್ತು ಅವರ ಮಕ್ಕಳ ವಿರುದ್ಧ ಕಾನೂನು ಕ್ರಮವನ್ನು ತೆಗೆದುಕೊಂಡಿಲ್ಲ. ಸದರಿ ಜಿ ಪಿ ಎ ದಾಖಲೆಯನ್ನು ನಾನು ಮತ್ತು ಈಗಾಗಲೇ ಮೊದಲೇ ಹೇಳಿದ ವ್ಯಕ್ತಿಗಳು ಸೇರಿ ಮಾಡಿಕೊಟ್ಟಿರುವುದರಿಂದ ನಾನು ಆ ರೀತಿ ಕಾನೂನು ಕ್ರಮವನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇತರರು ಸೇರಿ ಜಿ ಪಿ ಎ ದಾಖಲೆಯನ್ನು ಬರೆದುಕೊಟ್ಟಿದ್ದರು ಕೂಡ ಪ್ರತಿವಾದಿ 7 ಮತ್ತು 8 ರವರ ಸೊತ್ತನ್ನು ಲಟಾಯಿಸುವ ಉದ್ದೇಶದಿಂದ ಈಗ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಿ ಪಿ ಎ ದಾರರಾದ ಪ್ರತಿವಾದಿ 4 ರವರ ವಿರುದ್ಧ ಹಾಗೂ ಪ್ರತಿವಾದಿ 5 ರವರ ವಿರುದ್ಧ ನಾನು ಜಿ ಪಿ ಎ ದಾಖಲೆಯ ಸಂಬಂಧ ಕಾನೂನು ಕ್ರಮವನ್ನು ಕೈಗೊಂಡಿದ್ದೀರಾ ಎಂದರೆ ಸಾಕ್ಷಿ ಅವರು ವಿರುದ್ಧ ಪೋಲಿಸ್ ದೂರು ಕೊಡಲು ಹೋದಾರನ್ನು ಅದನ್ನು ಸ್ವೀಕಾರ ಮಾಡಿಲ್ಲ. ಆ ನಂತರ ನಾನು ಈ ದಾವೆಯನ್ನು ಸಲ್ಲಿಸಿಕೊಂಡೆ. ಅವರು ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಿಕೊಂಡಿಲ್ಲ. ನನ್ನ ತಂದೆ, ಚಿಕ್ಕಪ್ಪ ಮತ್ತು ಇತರರನ್ನು ಕಾಪಾಡುವ ಉದ್ದೇಶದಿಂದ ಕ್ರಿಮಿನಲ್ ಕಾನೂನು ಕ್ರಮ ವಹಿಸಲಿಲ್ಲ ಎಂದರೆ ಸರಿಯಲ್ಲ. ನಾನು ವಕೀಲನಾಗಿ ವೃತ್ತಿಯನ್ನು ಮಾಡುತ್ತಿದ್ದು. ಪೋಲಿಸ್ ರವರು ನನ್ನ ದೂರನ್ನು ಸ್ವೀಕಾರ

ಮಾಡದಿದ್ದಾಗ, ಆನಂತರ ಆ ಸಂಬಂಧವಾಗಿ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಆ ಬಗ್ಗೆ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳಲಿಲ್ಲ ಎಂದರೆ ಸಾಕ್ಷಿ ನನಗೆ ವೈಯಕ್ತಿಕ ಕಾರಣಗಳು ಇದ್ದವು ಮತ್ತು ಓಡಾಲು ಆಗುವುದಿಲ್ಲ ಎಂದು ಕ್ರಿಮಿನಲ್ ಕಾನೂನು ಕ್ರಮ ಕೈಗೊಂಡಿಲ್ಲ ಎಂದು ನುಡಿಯುತ್ತಾರೆ. ನಾನು ವಕೀಲನಾಗಿಯು ಮತ್ತು ವ್ಯವಸಾಯಗಾರನಾಗಿ ಕೆಲಸ ಮಾಡುತ್ತಿದ್ದೇನೆ.

<u>ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ನೀಡಲಾಯಿತು.</u>

**(**ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

**ಓ. ಹೇ. ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.